# Mangalore University declares 6th Sem UG results within 3 days of completing evaluation process

MANGALURU, DHNS: The Mangalore University has announced the results of the sixth semester undergraduate examinations held in June and July 2025.

The results, covering a total of 15,534 students, were published on Tuesday on the university's UUCMS portal at www.uucms.karnataka.gov.in.

The university had conducted the second, fourth and sixth semester undergraduate examinations recently, and the evaluation of the answer scripts began on July 2 at four designated evaluation centres.

The sixth semester evaluation process was completed by July 19, and the results were declared within just three days.

Vice Chancellor Prof P L Dharma released the list.

The sixth semester results were declared for students enrolled in a wide range of undergraduate programmes -- Bachelor of Science (BSc), Bachelor of Commerce (BCom), Bachelor of Social Work (BSW), Bachelor of Computer Applications (BCA), Bachelor of Business Administration (BBA), and specializsed programmes like BSc in Food and Nutrition Dietetics (FND), Animation and Visual Effects, Food Technology, Home Science, Fashion Design, and Interior Design and Decoration.

The results of Bachelor of Arts (Human Resource Development), Bachelor of Hotel Management (BHM), and Bachelor of Visual Arts (BVA) programmes were also announced.

Registrar (Evaluation) Prof Devendrappa H said the results for the second and fourth semester UG students, as well as the eighth semester BHM, BA in Speech-Language Pathology (SLP), and other non-NEP (New Education Policy) repeaters, would be published shortly.

He said this year, the university implemented a fully digitised process for entering marks directly at the evaluation centres. "This enabled the university to publish results while the evaluation was still in progress. The seamless coordination between exam board chairpersons, evaluation coordinators, evaluators, and non-teaching staff played a vital role in completing the process on time and ensuring the early publication of results." The university will soon issue a notification inviting applications for revaluation, once all results are declared, he added.

PUBLIC NOTICE

# ಯಕ್ಷ ಪ್ರತಿಮೆಗಳು ಇಲ್ಲಿ ಜೀವಂತ!



ಪುಟ ೧➡ಇವುಗಳನ್ನು ನೋಡುತ್ತಿದ್ದಂತೆ ಪೌರಾಣಿಕ ಕಥೆಗಳು ಕಣ್ಣಮುಂದೆ ಸುಳಿದಾಡುತ್ತವೆ. ಯಕ್ಷಗಾನದ ಹಿಮ್ಮೇಳ ಹಾಗೂ ಮುಮ್ಮೇಳಕ್ಕೆ ಸಂಬಂಧಿಸಿದಂತೆ ಯಕ್ಷಗಾನದ ವಿವಿಧ ವೇಷಗಳ ಮಾದರಿಗಳು, ಮುಖವಾಡಗಳು, ವಿವಿಧ ವೇಷಗಳಿಗೆ ಅನುಸಾರವಾಗಿ ವಿವಿಧ ವಿನ್ಯಾಸದ ಕಿರೀಟಗಳು, ಮುಖವರ್ಣಿಕೆಗಳು ಹೀಗೆ ಯಕ್ಷಗಾನಕ್ಕೆ ಸಂಬಂಧಿಸಿದಂತೆ ವಿವಿಧ ಮಾದರಿಗಳ ಪ್ರತಿಕೃತಿಗಳನ್ನು ಇಲ್ಲಿ ಅನಾವರಣಗೊಳಿಸಲಾಗಿದೆ.

**ಯಾವೆಲ್ಲಾ ವೇಷಗಳಿವೆ?:** ಹತ್ತು ಮುಖ್ಯ ವೇಷಗಳ ಆಳೆತ್ತರದ ಮಾದರಿಗಳನ್ನು ಬಾಳಿಕೆಯ ದೃಷ್ಟಿಯಿಂದ ಫೈಬರ್‌ನಿಂದ ನಿರ್ಮಿಸಲಾಗಿದೆ. ಈ ಯಕ್ಷ ಮಾದರಿಗಳಲ್ಲಿ ಪುಂಡು ವೇಷ, ಪೀಠಿಕೆ ವೇಷ, ಹೆಣ್ಣು ಬಣ್ಣ (ಕುತ್ತರಿ) - ರಾಕ್ಷಸ ಸ್ತ್ರೀ ವೇಷ, ಸ್ತ್ರೀ ವೇಷ (ಮುಖ್ಯ ಸ್ತ್ರೀ ಪಾತ್ರ), ಕಿರಾತ, ಭೀಮನ ಮುಡಿ (ಅರೆಬಣ್ಣ), ಹನುಮಂತ, ಬಣ್ಣದ ವೇಷ (ರಾಜಬಣ್ಣ), ಹಾಸ್ಯ ಪಾತ್ರ (ವಿದೂಷಕ), ರಾಜವೇಷ ಇವು ಮುಖ್ಯವಾಗಿವೆ.

**ಬಾಳಿಕೆ ಬರುವಂತೆ ರಚನೆ:** ಈ ವೇಷಗಳ ಮಾದರಿಗಳನ್ನು ಸುಳ್ಯದ 'ರಂಗಸುರಭಿ'ಯ ಮಹಾಬಲ ಕಲ್ಮಡ್ಕ ಅವರು ನಿರ್ಮಿಸಿಕೊಟ್ಟಿದ್ದಾರೆ.

**ಆಕರ್ಷಕ ರೀತಿಯಲ್ಲಿ ಕಂಗೊಳಿಸುತ್ತಿರುವ ಈ ವಸ್ತುಸಂಗ್ರಹಾಲಯ ಯಕ್ಷಗಾನದ ಸಮಗ್ರ ಮಾಹಿತಿ ಒದಗಿಸುತ್ತಿರುವುದು ಸುಳ್ಳಲ್ಲ.**

ಈ ಎಲ್ಲಾ ವೇಷಗಳ ಮಾದರಿಗಳನ್ನು ಯಕ್ಷಗಾನದ ಸಾಂಪ್ರದಾಯಿಕ ಶೈಲಿಯ ಆಭರಣಗಳು ಹಾಗೂ ವೇಷಭೂಷಣಗಳಿಗನುಸಾರವಾಗಿ ನಿರ್ಮಿಸಲಾಗಿದೆ. ಈ ಆಭರಣಗಳಿಗೆ ಹಾಗೂ ವೇಷಭೂಷಣಗಳಿಗೆ ಬಳಕೆ ಮಾಡಿದ ಬೇಗಡೆ, ಬಟ್ಟೆಗಳು, ಕನ್ನಡಿ ಹರಳು, ಜರಿ, ಬಣ್ಣಗಳು ಇತ್ಯಾದಿ ಸಾಮಗ್ರಿಗಳನ್ನು ಹೆಚ್ಚು ಬಾಳಿಕೆ ಬರುವಂತಹವುಗಳನ್ನೇ ಬಳಸಲಾಗಿದೆ. ಇದರ ನಿರ್ಮಾಣದಲ್ಲಿ ಪ್ರಸಿದ್ಧ ರಂಗ ಕಲಾವಿದರಾದ ಜೀವನ್ ರಾಮ್ ಸುಳ್ಯ ಅವರ ಸಹಕಾರವನ್ನೂ ಪಡೆಯಲಾಗಿದೆ.

▸ಸುಮನಾ ಬಾಯಾರು,
ಪತ್ರಿಕೋದ್ಯಮ ದ್ವಿತೀಯ ಸೆಮಿಸ್ಟರ್ ವಿದ್ಯಾರ್ಥಿನಿ
ವಿವೇಕಾನಂದ ಕಾಲೇಜು, ಪುತ್ತೂರು

# ಮಂಗಳೂರಿನಲ್ಲಿ ಅಬ್ಬಕ್ಕ ಹೆಸರಿನ ಮೆರಿಟೈಮ್ ವಿವಿ ಸ್ಥಾಪನೆಗೆ ಸಂಸದ ಕ್ಯಾ. ಚೌಟ ಮನವಿ

**• ಮಂಗಳೂರು:** ಕಡಲನಗರಿ ಮಂಗಳೂರಿನಲ್ಲಿ ವೀರ ವನಿತೆ ಅಬ್ಬಕ್ಕ ರಾಣಿ ಹೆಸರಿನಲ್ಲಿ ಪ್ರತ್ಯೇಕ ಮೆರಿಟೈಮ್ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕೆಂದು ಕೋರಿ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಕೇಂದ್ರ ಬಂದರು, ಶಿಪ್ಪಿಂಗ್ ಹಾಗೂ ಜಲಮಾರ್ಗಗಳ ಸಚಿವಾಲಯದ ಕಾರ್ಯದರ್ಶಿ ಟಿ.ಕೆ. ರಾಮಚಂದ್ರನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.



ಹೊಸದಿಲ್ಲಿಯಲ್ಲಿ ಸಚಿವಾಲಯದ ಕಾರ್ಯದರ್ಶಿಯನ್ನು ಭೇಟಿ ಮಾಡಿದ ಸಂಸದರು, ಪ್ರಧಾನಿ ಮೋದಿ ಅವರು ನಮ್ಮ ದೇಶದ ಮೆರಿಟೈಮ್ ಸಾಮರ್ಥ್ಯಕ್ಕೆ ಹೊಂದಿಕೊಂಡು ಭಾರತವನ್ನು ಜಾಗತಿಕ ಮೆರಿಟೈಮ್ ಹಬ್ ಮಾಡುವ ದೂರದೃಷ್ಟಿ ಹೊಂದಿದ್ದಾರೆ. ಹೀಗಿರುವಾಗ, ಬಹಳ ಶ್ರೀಮಂತ ಮೆರಿಟೈಮ್ ಪರಂಪರೆಯನ್ನು ಹೊಂದಿರುವ ಮಂಗಳೂರಿನಲ್ಲಿ ಪ್ರತ್ಯೇಕ ಮೆರಿಟೈಮ್ ವಿವಿಯನ್ನು ಸ್ಥಾಪಿಸುವುದಕ್ಕೆ ವಿಪುಲ ಅವಕಾಶದ ಜತೆಗೆ ಸೂಕ್ತ ಸ್ಥಳವಾಗಿದೆ. ಇನ್ನು 16ನೇ ಶತಮಾನದಲ್ಲಿಉಳ್ಳಾಲದ ರಾಣಿ ಅಬ್ಬಕ್ಕ ತಮ್ಮ ವೀರ ಪರಾಕ್ರಮ, ನಾಯಕತ್ವದಲ್ಲಿ ಪೋರ್ಚುಗೀಸರ ವಿರುದ್ಧ ಧೈರ್ಯವಾಗಿ ಹೋರಾಡುವ ಮೂಲಕ ಕರಾವಳಿಯ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿರುವ ಧೀರ ಮಹಿಳೆ. ತನ್ನ ಧೈರ್ಯ ಹಾಗೂ ತಂತ್ರಗಾರಿಕೆಯಿಂದ ಭಾರತದ ಕಡಲ ತೀರವನ್ನು ಹೇಗೆ ರಕ್ಷಣೆ ಮಾಡಿದ್ದರು ಎನ್ನುವುದಕ್ಕೆ ರಾಣಿ ಅಬ್ಬಕ್ಕ ಅವರ ರಾಜ್ಯಭಾರ ಉತ್ತಮ ನಿದರ್ಶನ. 2025 ವರ್ಷದಲ್ಲಿ ವೀರರಾಣಿ ಅಬ್ಬಕ್ಕ ಅವರ 500ನೇ ವರ್ಷಾಚರಣೆ ಮಾಡಲಾಗುತ್ತಿದೆ. ಇಂಥಹ ಸುಸಂದರ್ಭದಲ್ಲಿ ಮಂಗಳೂರಿನಲ್ಲಿ ಕಡಲ ರಕ್ಷಣೆಗೆ ಪೂರಕವಾಗುವ ಮೆರಿಟೈಮ್ ವಿವಿಯನ್ನು ಸ್ಥಾಪಿಸಿ ಅದಕ್ಕೆ ರಾಣಿ ಅಬ್ಬಕ್ಕ ಹೆಸರಿಡುವುದು ಅತ್ಯಂತ ಸೂಕ್ತ ಹಾಗೂ ಔಚಿತ್ಯಪೂರ್ಣವಾದದ್ದು ಎಂದು ಕ್ಯಾ. ಚೌಟ ಅವರು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಇನ್ನೊಂದೆಡೆ, ನವ ಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ತನ್ನ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವಾಗ, ಬಂದರು ನಗರಿ ಮಂಗಳೂರಿನಲ್ಲಿ ಮೆರಿಟೈಮ್ ವಿವಿ ಸ್ಥಾಪಿಸುವುದು ಕೂಡ ಹೆಚ್ಚು ಪ್ರಸ್ತುತವೆನಿಸುತ್ತದೆ. ಇದರಿಂದ ಮಂಗಳೂರು ಸೇರಿದಂತೆ ದಕ್ಷಿಣ ಕನ್ನಡದ ಆರ್ಥಿಕತೆಯು ಮತ್ತಷ್ಟು ಸದೃಢಗೊಳ್ಳುತ್ತದೆ. ಹೀಗಾಗಿ, ಈ ವಿವಿ ಸ್ಥಾಪನೆ ಪ್ರಸ್ತಾವನೆಯು ಪ್ರಧಾನಮಂತ್ರಿಯವರ 'ಮೆರಿಟೈಮ್ ಅಮೃತ್ ಕಾಲ್ ವಿಷನ್ 2047'ದೊಂದಿಗೆಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ ಎಂದು ಕ್ಯಾ. ಚೌಟ ಅವರು ಅಭಿಪ್ರಾಯಪಟ್ಟಿದ್ದಾರೆ.

ಮಂಗಳೂರಿನ ಭೌಗೋಳಿಕ ಅನುಕೂಲಗಳು, ಐತಿಹಾಸಿಕ ಮಹತ್ವ ಮತ್ತು ಪ್ರಮುಖ ಬಂದರುಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ಹತ್ತಿರವಿರುವ ಕಾರಣ ಇಲ್ಲಿ ಮೆರಿಟೈಮ್ ವಿವಿಯಂಥ ರಾಷ್ಟ್ರೀಯ ಮನ್ನಣೆಯ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಅತ್ಯಂತ ಸೂಕ್ತ ಸ್ಥಳವಾಗಿದೆ. ಈ ವಿವಿಯಲ್ಲಿ ಬಿ.ಟೆಕ್, ಬಿ.ಎಸ್ಸಿ, ಬಿಬಿಎ, ಎಂ.ಟೆಕ್, ಎಂಬಿಎ, ಎಂ.ಎಸ್ಸಿ ಮತ್ತು ಡಿಪ್ಲೊಮಾಗಳು ಸೇರಿದಂತೆ ವ್ಯಾಪಕ ಶ್ರೇಣಿಯ ಕೋರ್ಸ್ ಗಳನ್ನು ಪರಿಚಯಿಸಬಹುದು. ಇದರಿಂದ ಮರೀನ್ ಎಂಜಿನಿಯರಿಂಗ್, ಕಡಲ ಕಾನೂನು, ಬಂದರು ಮತ್ತು ಟರ್ಮಿನಲ್ ನಿರ್ವಹಣೆ ಮತ್ತು ಕಡಲ ಮಾಹಿತಿ ತಂತ್ರಜ್ಞಾನದಂತಹ ವಿಷಯಗಳಲ್ಲಿ ಭವಿಷ್ಯಕ್ಕೆ ಸಿದ್ಧವಾದ ವೃತ್ತಿಪರರನ್ನು ಸೃಷ್ಟಿಸಲು ಈ ವಿಶ್ವವಿದ್ಯಾಲಯವು ನಿರ್ಣಾಯಕ ಪಾತ್ರ ವಹಿಸಲಿದೆ. ಇದು ಭಾರತದ ಕಡಲ ಪ್ರಗತಿಯ ಕೌಶಲ್ಯ ಅಭಿವೃದ್ಧಿ, ಸಂಶೋಧನೆ ಮತ್ತು ನೀತಿ ನಾವೀನ್ಯತೆ ಅಗತ್ಯಗಳನ್ನು ಕೂಡ ಪೂರೈಸುತ್ತದೆ ಎಂದು ಕ್ಯಾ. ಚೌಟ ಅವರು ಮನವಿಯಲ್ಲಿ ತಿಳಿಸಿದ್ದಾರೆ.

**ವಿವಿ ಸ್ಥಾಪಿಸಲು ತಜ್ಞರ ಸಮಿತಿ ನೇಮಕಕ್ಕೆ ಕ್ಯಾ. ಚೌಟ ಸಲಹೆ**

ಮಂಗಳೂರಿನಲ್ಲಿ ಮೆರಿಟೈಮ್ ವಿವಿಯನ್ನು ಸ್ಥಾಪಿಸುವುದಕ್ಕೆ ಬೇಕಾಗುವ ಪೂರ್ವ ಸಿದ್ಧತೆ, ಸಾಧ್ಯಾ-ಸಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸುವುದಕ್ಕೆ ಸಚಿವಾಲಯದಿಂದ ಪ್ರತ್ಯೇಕ ತಜ್ಞರ ಸಮಿತಿಯೊಂದನ್ನು ನೇಮಕಗೊಳಿಸಬೇಕು. ಈ ಸಮಿತಿ ಮೂಲಕ ವಿವಿಯ ಸ್ಥಾಪನೆಯ ಚೌಕಟ್ಟು ಹಾಗೂ ಅದಕ್ಕೆ ಸಂಬಂಧಿಸಿದ ರೂಪುರೇಷಗಳನ್ನು ಸಿದ್ಧಪಡಿಸಬೇಕು. ಜತೆಗೆ ನವ ಮಂಗಳೂರು ಪ್ರಾಧಿಕಾರದಿಂದ ಈ ಬಗ್ಗೆ ವಿಸ್ತೃತ ಯೋಜನಾ ವರದಿ (ಡಿಪಿಆರ್)ಯನ್ನು ಕೂಡ ಸಿದ್ಧಪಡಿಸಬೇಕು. ಈ ವಿವಿ ಸ್ಥಾಪಿಸುವುದಕ್ಕೆ ಇದಕ್ಕೆ ಸಂಬಂಧಪಟ್ಟ ಎಲ್ಲ ಇಲಾಖೆಗಳು, ಪಾಲುದಾರರು, ಸಚಿವಾಲಯಗಳ ಜತೆಗೂ ಸಮನ್ವಯತೆ ಕೈಗೊಂಡು ಸೂಕ್ತ ಸಲಹೆ ಪಡೆದುಕೊಳ್ಳಬೇಕು. ಆ ಮೂಲಕ ಮಂಗಳೂರಿನಲ್ಲಿ ಮೆರಿಟೈಮ್ ವಿವಿ ಸ್ಥಾಪನೆಗೆ ಬೇಕಾಗುವ ಎಲ್ಲ ಪೂರ್ವ ಸಿದ್ಧತೆ ಕೈಗೊಂಡು ಅದು ಕಾರ್ಯರೂಪಕ್ಕೆ ಬರುವುದಕ್ಕೆ ಸೂಕ್ತ ಕ್ರಮವನ್ನು ಸಚಿವಾಲಯ ಕೈಗೊಳ್ಳಬೇಕು ಎಂದು ಕ್ಯಾ. ಚೌಟ ಅವರು ಮನವಿಯಲ್ಲಿ ಆಗ್ರಹಿಸಿದ್ದಾರೆ.

# ಮಂಗಳೂರು ವಿವಿ 6ನೇ ಸೆಮಿಸ್ಟರ್ ಪದವಿ ಪರೀಕ್ಷೆ ಫಲಿತಾಂಶ ಪ್ರಕಟ



**• ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯವು ಜೂನ್ - ಜುಲೈ - 2025 ರಲ್ಲಿ ಎಲ್ಲಾ ಪದವಿ ಕಾರ್ಯಕ್ರಮಗಳ ದ್ವಿತೀಯ ಚತುರ್ಥ ಮತ್ತು ಆರನೇ ಸೆಮಿಸ್ಟರ್‌ನ ಪರೀಕ್ಷೆಗಳು ಇತ್ತೀಚೆಗೆ ಮುಗಿಸಿದ್ದು, ಈ ಪರೀಕ್ಷೆಗಳ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯವು ಜು.2 ರಂದು ಆರಂಭಗೊಂಡು ನಾಲ್ಕು ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯ ಮಾಪನ ಕಾರ್ಯವು ನಡೆಯುತ್ತಿದೆ. ಪದವಿಯ ಆರನೇ ಸೆಮಿಸ್ಟರ್‌ನ ಮೌಲ್ಯಮಾಪನ ಕಾರ್ಯವು ಜು.19 ರಂದು ಪೂರ್ಣಗೊಂಡಿದ್ದು ವಿದ್ಯಾರ್ಥಿಗಳಿಗೆ ಮುಂದಿನ ಉನ್ನತ ವ್ಯಾಸಾಂಗಕ್ಕಾಗಿ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಮೌಲ್ಯಮಾಪನ ನಡೆದ ಮೂರೇ ದಿನಗಳಲ್ಲಿ 15, 534 ವಿದ್ಯಾರ್ಥಿಗಳ ಫಲಿತಾಂಶವನ್ನು ಜು.22 ರಂದು ಮಂಗಳವಾರ ಮಂಗಳೂರು ವಿವಿಯ ಯುಯುಸಿಎಮ್‌ಎಸ್‌ನ ಅಧಿಕೃತ ವೆಬ್‌ಸೈಟ್ www.uucms.karnataka.gov.in ನಲ್ಲಿ ಪ್ರಕಟಿಸಿದೆ.

ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಅವರು ಮಂಗಳೂರು ವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಫಲಿತಾಂಶದ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದರು.

ಈ ಸಂದರ್ಭದಲ್ಲಿ ಮಂಗಳೂರು ವಿವಿ ಕುಲಸಚಿವ ಕೆ.ರಾಜು ಮೊಗವೀರ, ಪರೀಕ್ಷಾಂಗಕುಲಸಚಿವ ಪ್ರೊ.ದೇವೇಂದ್ರಪ್ಪ ಹೆಚ್, ಹಣಕಾಸು ಅಧಿಕಾರಿ ಪ್ರೊ.ವೈ. ಸಂಗಪ್ಪ, ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.

ಮೌಲ್ಯಮಾಪನ ಪೂರ್ಣಗೊಳಿಸಿದ ಬಿಎಸ್ಸಿ, ಬಿಕಾಂ, ಬಿಎಸ್ ಡಬ್ಲ್ಯು, ಬಿಸಿಎ, ಬಿಬಿಎ, ಬಿಎಸ್ಸಿ (ಎಫ್ ಎನ್ ಡಿ) ಬಿಎಸ್ಸಿ (ಎನ್ನಿಮೇಶನ್ ಮತ್ತು ವಿಶ್ಯುವಲ್ ಇಫೆಕ್ಟ್, ಬಿಎಸ್ಸಿ (ಫುಡ್ ಟೆಕ್ನಾಲಜಿ), ಬಿಎಸ್ಸಿ (ಹೋಮ್ ಸಯನ್ಸ್), ಬಿ.ಎ. ( ಎಚ್ ಆರ್ ಡಿ) ಬಿಎಸ್ಸಿ ( ಫ್ಯಾಶನ್ ಡಿಸೈನ್), ಬಿಎಸ್ಸಿ (ಐಡಿ-ಡಿ), ಬಿಹೆಚ್ ಎಂ, ಬಿವಿಎ ಕಾರ್ಯಕ್ರಮಗಳ 6ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಉಳಿದಂತೆ ಎಲ್ಲಾ ಪದವಿಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳ ಹಾಗೂ ಬಿಎಚ್ ಎಂ 8ನೇ ಸೆಮಿಸ್ಟರ್, ಬಿಎ (ಎಸ್ ಎಲ್ ಪಿ), ಹಾಗೂ ಎನ್‌ಇಪಿ ಅಲ್ಲದ ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗಕುಲಸಚಿವ ಪ್ರೊ.ದೇವೇಂದ್ರಪ್ಪ ಹೆಚ್. ಅವರು ತಿಳಿಸಿದ್ದಾರೆ.

ಮಂಗಳೂರು ವಿವಿಯು ಈ ಬಾರಿ ಮೌಲ್ಯಮಾಪನ ಕೇಂದ್ರದಲ್ಲಿಯೇ
ಅಂಕಪಟ್ಟಿಕರಣ ದಾಖಲಿ
ಪ್ರಕ್ರಿಯೆಯನ್ನು ಆನ್‌ಲೈನ್ ವ್ಯವಸ್
ಮೂಲಕ ಸಂಪೂರ್ಣವಾಗಿ ಗಣಕೀಕ
ಗೊಳಿಸಿದ್ದರಿಂದ ಮೌಲ್ಯಮಾ
ನಡೆಯುತ್ತಿರುವಾಗಲೇ ಫಲಿತಾಂಶ
ಪ್ರಕಟಿಸಲು ಸಾಧ್ಯವಾಗಿದೆ.
ಪೂರಕವಾಗಿ ಎಲ್ಲಾ ಪರೀಕ್ಷಾ ಕೇಂದ್ರ
ಸಂಯೋಜಕರು ಪರೀಕ್ಷಾ ಮುಂ
ಅಧ್ಯಕ್ಷರು, ಮೌಲ್ಯಮಾಪಕರು, ಶಿಕ್ಷಕ
ಸಿಬ್ಬಂದಿಗಳ ಪೂರ್ಣಪ್ರಮಾ
ಸಹಕಾರದಿಂದ ನಿಗದಿತ ಸಮಯ
ಮೌಲ್ಯಮಾಪನವನ್ನು ಪೂರ್ಣಗೊ
ಅತ್ಯಂತ ಕಡಿಮೆ ಸಮಯ
ಫಲಿತಾಂಶವನ್ನು ಪ್ರಕಟಿ
ಸಾಧ್ಯವಾಗಿದೆ. ಪರೀಕ್ಷಾ ಫಲಿತಾಂಶ
ಸಂಬಂಧಿಸಿ, ಮರುಮೌಲ್ಯಮಾ
(ಉಳಿದ ಎಲ್ಲಾ ಫಲಿತಾಂಶ ಪ್ರಕಟ
ಬಳಿಕ) ಅರ್ಜಿ ಆಹ್ವಾನಿಸಿ ಸದ್ಯದಲ್ಲಿ
ವಿಶ್ವವಿದ್ಯಾಲಯದಿಂದ ಪ್ರಕಟಣೆ ಹೊ
ಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛ
ವಿದ್ಯಾರ್ಥಿಗಳು ನಿಗದಿತ ಅರ್ಜಿ
ಪಾವತಿಸಿ ಮರುಮೌಲ್ಯಮಾಪನಕ್ಕೆ
ಸಲ್ಲಿಸಬಹುದಾಗಿದೆ ಎಂದು ಪರೀ
ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿ

## ಮಂಗಳೂರು ವಿವಿಯಲ್ಲೊಂದು ಮ್ಯೂಸಿಯಂ

# ಯಕ್ಷ ಪ್ರತಿಮೆಗಳಿಲ್ಲಿ ಜೀವಂತ!

**• ಮಂಗಳೂರು:** ಈ ಕೇಂದ್ರದೊಳಗೆ ಪ್ರವೇಶಿಸುತ್ತಿದ್ದಂತೆ ಮೈಮನ ಪುಳಕಗೊಳ್ಳುತ್ತದೆ. ನಮ್ಮ ಕಲಾಪರಂಪರೆಯ ಬಗ್ಗೆ ಸಹಜವಾಗಿಯೇ ಅಭಿಮಾನ, ಬಿಗುಮಾನ ಹೆಚ್ಚಾಗುತ್ತದೆ! ಮಂಗಳ ಗಂಗೋತ್ರಿಯ ಮಡಿಲಲ್ಲಿರುವ ಮಂಗಳೂರು ವಿಶ್ವವಿದ್ಯಾಲಯದಲ್ಲಿರುವ ಯಕ್ಷಮಂಗಳ ವಸ್ತುಸಂಗ್ರಹಾಲಯ ಕರಾವಳಿಯ ಮೇರು ಕಲೆಯ ಮಹತ್ವ ಸಾರಿ ಹೇಳುತ್ತಿದೆ. ಒಳಗೆ ಹೆಜ್ಜೆ ಇಡುತ್ತಿದ್ದಂತೆ ಎದುರುಗೊಳ್ಳುವ ಮೈರಾವಣನ ಬೃಹತ್ ರಕ್ಕಸ ವೇಷ, ಕಿರೀಟ ವೇಷದ ದೇವೇಂದ್ರ, ಅಬ್ಬಾ! ಈ ಕಲಾಕೃತಿಯ ಸೊಬಗನ್ನು ಕಣ್ತುಂಬಿಕೊಳ್ಳುವುದೇ ಚೆಂದ. ಯಕ್ಷ ಕಲೆಯ ಸಾಕ್ಷಾತ್ ಅನಾವರಣ ಈ ಮ್ಯೂಸಿಯಂನಲ್ಲಾಗಿದೆ.

**ಕಣ್ಣಿಗೆ ಕಟ್ಟುವ ಚಿತ್ರಣ:** ಯಕ್ಷಗಾನ ಅಧ್ಯಯನ ಕೇಂದ್ರದೊಳಗಿರುವ ಯಕ್ಷಮಂಗಳದ ಬಾಗಿಲು ತೆರೆದಾಗಲೇ ಯಕ್ಷಗಾನದ ತೆಂಕು ಹಾಗೂ ಬಡಗುತಿಟ್ಟಿನ ವೇಷ ಭೂಷಣಗಳು ಕಣ್ಣಿಗೆ ಕಟ್ಟುತ್ತವೆ. ಮೈರಾವಣ, ಭೀಮ, ಇಂದ್ರ, ಸ್ತ್ರೀ ವೇಷ, ಕಿರಾತ, ಹನುಮಂತ ಪ್ರತಿ ವೇಷಗಳು ಇಲ್ಲಿ ಜೀವ ಪಡೆದುಕೊಂಡಿವೆ. ಕೆಲ ಪ್ರತಿಮೆಗಳು ಗಾಜಿನೊಳಗೆ ಭದ್ರವಾಗಿದ್ದರೂ ಜೀವಕಳೆಯುಂಡಿವೆ. ನೋಡುಗರನ್ನೇ ದಿಟ್ಟಿಸಿನೋಡುವ ಆ ವೇಷಗಳ ಮಾದರಿಗಳು ನಿಜಕ್ಕೂ ನಿಬ್ಬೆರಗುಗೊಳಿಸುತ್ತವೆ.

### ಯಕ್ಷ ಕಲೆಯ ಸಾಕ್ಷಾತ್ ಅನಾವರಣ



### ಆಕರ್ಷಣೆಯ ಕೇಂದ್ರ

ಯಕ್ಷಮಂಗಳ ವಸ್ತು ಸಂಗ್ರಹಾಲಯ ಆಕರ್ಷಣೆಯ ಕೇಂದ್ರವಾಗಿದೆ. ಇಲ್ಲಿಗೆ ಬರುವ ಮಂದಿ ಕರಾವಳಿಯ ಕಲಾಪರಂಪರೆಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ ಎನ್ನುತ್ತಾರೆ ಕೇಂದ್ರದ ಅಧಿಕಾರಿಗಳು.

ಬೆಳ್ಳಿ ಬಂಗಾರ

ಕನಿಷ್ಠ 24°c

# ಮಂಗ್ಳೂರು ವಿವಿ 6ನೇ ಸೆಮಿಸ್ಟರ್ ಪದವಿ ಫಲಿತಾಂಶ

## ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಫಲಿತಾಂಶ ಪ್ರಕಟ। ಉಳಿದ ರಿಸಲ್ಟ್ ಶೀಘ್ರ ಪ್ರಕಟ

• **ಕನ್ನಡ ಪ್ರಭ ವಾರ್ತೆ** ಮಂಗಳೂರು

ಮಂಗಳೂರು ವಿಶ್ವವಿದ್ಯಾನಿಲಯದ ಜೂನ್- ಜುಲೈ 2025 ರಲ್ಲಿ ಎಲ್ಲ ಪದವಿ ಕಾರ್ಯಕ್ರಮಗಳ ದ್ವಿತೀಯ ಚತುರ್ಥ ಮತ್ತು ಆರನೇ ಸೆಮಿಸ್ಟರ್‌ಪರೀಕ್ಷೆಗಳು ಇತ್ತೀಚೆಗೆ ಮುಗಿದಿದೆ. ಈ ಪರೀಕ್ಷೆಗಳ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯ ಜು.2 ರಂದು ಆರಂಭಗೊಂಡು ನಾಲ್ಕು ಮೌಲ್ಯಮಾಪನ ಕೇಂದ್ರಗಳಲ್ಲಿ ಮೌಲ್ಯಮಾಪನ ಕಾರ್ಯ ನಡೆಯುತ್ತಿದೆ. ಪದವಿಯ ಆರನೇ ಸೆಮಿಸ್ಟರ್‌ನ ಮೌಲ್ಯಮಾಪನ ಜು.19 ರಂದು ಪೂರ್ಣಗೊಂಡಿದೆ. ವಿದ್ಯಾರ್ಥಿಗಳಿಗೆ ಮುಂದಿನ ಉನ್ನತ ವ್ಯಾಸಂಗಕ್ಕಾಗಿ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಮೌಲ್ಯಮಾಪನ ನಡೆದ ಮೂರೇ ದಿನಗಳಲ್ಲಿ15,534ವಿದ್ಯಾರ್ಥಿಗಳಫಲಿತಾಂಶವನ್ನುಮಂಗಳವಾರ ಮಂಗಳೂರು ವಿವಿಯ UUCMS (ಯುಯುಸಿಎಮ್ ಎಸ್) ಅಧಿಕೃತ ವೆಬ್ ಸೈಟ್ www.uucms.karnataka.gov.in ನಲ್ಲಿ ಪ್ರಕಟಿಸಿದೆ.

ಮಂಗಳೂರು ವಿವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ ಅವರು ಮಂಗಳೂರು ವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಫಲಿತಾಂಶದ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದರು.

ಈ ಸಂದರ್ಭದಲ್ಲಿ ಮಂಗಳೂರು ವಿವಿ ಕುಲಸಚಿವ ಕೆ.ರಾಜು ಮೊಗವೀರ, ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಹೆಚ್, ಹಣಕಾಸು ಅಧಿಕಾರಿ ಪ್ರೊ.ವೈ.ಸಂಗಪ್ಪ, ಮತ್ತಿತರರು ಇದ್ದರು.

**ಉಳಿದ ಸೆಮಿಸ್ಟರ್‌ಫಲಿತಾಂಶ ಶೀಘ್ರ:** ಮೌಲ್ಯಮಾಪನ ಪೂರ್ಣಗೊಳಿಸಿದ ಬಿಎಸ್ಸಿ, ಬಿಕಾಂ, ಬಿಎಸ್ ಡಬ್ಲ್ಯು, ಬಿಸಿಎ, ಬಿಬಿಎ, ಬಿಎಸ್ಸಿ( ಎಫ್ ಎನ್ ಡಿ) ಬಿಎಸ್ಸಿ(ಎನ್ನಿಮೇಶನ್ ಮತ್ತು ವಿಝ್ಯುವಲ್ ಇಫೆಕ್ಟ್, ಬಿಎಸ್ಸಿ (ಫುಡ್ ಟೆಕ್ನಾಲಜಿ), ಬಿಎಸ್ಸಿ ( ಹೋಮ್ ಸೈಯನ್ಸ್), ಬಿ.ಎ( ಎಚ್ ಆರ್‌ಡಿ) ಬಿಎಸ್ಸಿ ( ಫ್ಯಾಶನ್ ಡಿಸೈನ್), ಬಿಎಸ್ಸಿ(ಐಡಿ-ಡಿ), ಬಿಹೆಚ್ ಎಂ, ಬಿವಿಎ ಕಾರ್ಯಕ್ರಮಗಳ 6 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಉಳಿದಂತೆ ಎಲ್ಲ ಪದವಿಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳ ಹಾಗೂ ಬಿಎಚ್ ಎಂ 8 ನೇ ಸೆಮಿಸರ್, ಬಿಎ (ಎಸ್ ಎಲ್ ಪಿ) ಹಾಗೂ ಎನ್‌ಇಪಿ ಅಲ್ಲದ (non NEP) ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ತಿಳಿಸಿದ್ದಾರೆ.

ಮಂಗಳೂರು ವಿವಿಯು ಈ ಬಾರಿ ಮೌಲ್ಯಮಾಪನ ಕೇಂದ್ರದಲ್ಲಿಯೇ ಅಂಕ ದಾಖಲಿಸುವ ಪ್ರಕ್ರಿಯೆಯನ್ನು ಆನ್ ಲೈನ್ ವ್ಯವಸ್ಥೆಯ ಮೂಲಕ ಸಂಪೂರ್ಣವಾಗಿ ಗಣಕೀಕರಣಗೊಳಿಸಿದೆ.

ಆದ್ದರಿಂದ ಮೌಲ್ಯಮಾಪನ ನಡೆಯುತ್ತಿರುವಾಗಲೇ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗಿದೆ ಎಂದು ಪರೀಕ್ಷಾಂಗ ಕುಲಸಚಿವರ ಪ್ರಕಟಣೆ ತಿಳಿಸಿದೆ.



ಪದವಿ 6ನೇ ಸೆಮಿಸ್ಟರ್‌ಫಲಿತಾಂಶ ಪ್ರಕಟಿಸುತ್ತಿರುವ ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ

■ ಪರೀಕ್ಷಾ ಫಲಿತಾಂಶಗಳಿಗೆ ಸಂಬಂಧಿಸಿ, ಮರು ಮೌಲ್ಯಮಾಪನಕ್ಕೆ (ಉಳಿದ ಎಲ್ಲ ಫಲಿತಾಂಶ ಪ್ರಕಟವಾದ ಬಳಿಕ) ಅರ್ಜಿ ಆಹ್ವಾನಿಸಿ ಪದ್ಯದಲ್ಲಿಯೇ ವಿಶ್ವವಿದ್ಯಾಲಯದಿಂದ ಪ್ರಕಟಣೆ ಹೊರಡಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕ ಪಾವತಿಸಿ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪರೀಕ್ಷಾಂಗ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಬ್ಬಕ್ಕ ಮೆರಿಟೈಮ್ ವಿವಿ ಸ್ಥಾಪನೆಗೆ ಮನವಿ

ಮಂಗಳೂರು: ಮಂಗಳೂರಿನಲ್ಲಿ ಅಬ್ಬಕ್ಕ ರಾಣಿ ಹೆಸರಿನಲ್ಲಿ ಪ್ರತ್ಯೇಕ ಮೆರಿಟೈಮ್ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ವಿನಂತಿಸಿ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಮಂಗಳವಾರ ಕೇಂದ್ರ ಬಂದರು, ಶಿಪ್ಪಿಂಗ್ ಹಾಗೂ ಜಲಮಾರ್ಗಗಳ ಸಚಿವಾಲಯದ ಕಾರ್ಯದರ್ಶಿ ಟಿ.ಕೆ. ರಾಮಚಂದ್ರನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ನವದೆಹಲಿಯಲ್ಲಿ ಅವರನ್ನು ಭೇಟಿ ಮಾಡಿದ ಸಂಸದರು, ಶ್ರೀಮಂತ ಮೆರಿಟೈಮ್ ಪರಂಪರೆ ಹೊಂದಿರುವ ಮಂಗಳೂರಿನಲ್ಲಿ ಪ್ರತ್ಯೇಕ ಮೆರಿಟೈಮ್ ವಿವಿಯನ್ನು ಸ್ಥಾಪಿಸುವುದಕ್ಕೆ ವಿಪುಲ ಅವಕಾಶವಿದೆ. 16ನೇ ಶತಮಾನದಲ್ಲಿಉಳ್ಳಾಲದ ರಾಣಿ ಅಬ್ಬಕ್ಕ ವೀರ ಪರಾಕ್ರಮ, ನಾಯಕತ್ವದಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡುವ ಮೂಲಕ ಕರಾವಳಿಯ ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿರುವ ಧೀರ ಮಹಿಳೆ. ಅವರ 500ನೇ ಜನ್ಮ ವರ್ಷಾಚರಣೆ ಸಂದರ್ಭದಲ್ಲಿ ಕಡಲ ರಕ್ಷಣೆಗೆ ಪೂರಕವಾಗುವ ಮೆರಿಟೈಮ್ ವಿವಿಯನ್ನು ಸ್ಥಾಪಿಸಿ ಅದಕ್ಕೆ ರಾಣಿ ಅಬ್ಬಕ್ಕ ಹೆಸರಿಡುವುದು ಸೂಕ್ತ ಎಂದು ಅವರು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

M

ಸುದ್ದಿ 2 ನಿಮಿಷ

# ಮಂಗಳೂರು ವಿಶ್ವವಿದ್ಯಾನಿಲಯ: 6ನೇ ಸೆಮಿಸ್ಟರ್ ಫಲಿತಾಂಶ ಪ್ರಕಟ

ಉಳ್ಳಾಲ: ಮಂಗಳೂರು ವಿಶ್ವವಿದ್ಯಾನಿಲಯವು ಈಚೆಗೆ ನಡೆಸಿದ್ದ ಪದವಿಯ ಆರನೇ ಸೆಮಿಸ್ಟರ್‌ನ ಪರೀಕ್ಷೆಯ ಫಲಿತಾಂಶವನ್ನು ಮಂಗಳವಾರ ಪ್ರಕಟಿಸಿದೆ.

ಎರಡು, ನಾಲ್ಕು ಹಾಗೂ ಆರನೇ ಸೆಮಿಸ್ಟರ್‌ನ ಪರೀಕ್ಷೆಗಳು ಇತ್ತೀಚೆಗೆ ಮುಗಿದಿದ್ದು, ಈ ಪರೀಕ್ಷೆಗಳ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯವು ಜುಲೈ 2ರಿಂದ ನಡೆಯುತ್ತಿದೆ. ಪದವಿಯ ಆರನೇ ಸೆಮಿಸ್ಟರ್‌ನ ಮೌಲ್ಯಮಾಪನ ಕಾರ್ಯವು ಜುಲೈ 19ರಂದು ಪೂರ್ಣಗೊಂಡಿದ್ದು, ವಿದ್ಯಾರ್ಥಿಗಳಿಗೆ ಮುಂದಿನ ಉನ್ನತ ವ್ಯಾಸಂಗ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಮೌಲ್ಯಮಾಪನ ನಡೆದ ಮೂರೇ ದಿನಗಳಲ್ಲಿ 15, 534 ವಿದ್ಯಾರ್ಥಿಗಳ ಫಲಿತಾಂಶವನ್ನು ಮಂಗಳವಾರ ಪ್ರಕಟಿಸಿದೆ ಎಂದು ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ತಿಳಿಸಿದರು.

'ಬಿಎಸ್ಸಿ, ಬಿಕಾಂ, ಬಿಎಸ್‌ಡಬ್ಲ್ಯು, ಬಿಸಿಎ, ಬಿಬಿಎ, ಬಿಎಸ್ಸಿ (ಎಫ್‌ಎನ್‌ಡಿ) ಬಿಎಸ್ಸಿ (ಎನಿಮೇಷನ್ ಮತ್ತು ವಿಷ್ಯುವಲ್ ಇಫೆಕ್ಟ್, ಬಿಎಸ್ಸಿ (ಫುಡ್ ಟೆಕ್ನಾಲಜಿ), ಬಿಎಸ್ಸಿ (ಹೋಮ್ ಸೈಯನ್ಸ್), ಬಿ.ಎ (ಎಚ್‌ಆರ್‌ಡಿ) ಬಿಎಸ್ಸಿ (ಫ್ಯಾಷನ್ ಡಿಸೈನ್), ಬಿಎಸ್ಸಿ (ಐಡಿ ಅಂಡ್ ಡಿ), ಬಿಎಚ್‌ಎಂ, ಬಿವಿಎ ಕಾರ್ಯಕ್ರಮಗಳ 6ನೆ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶವನ್ನು ಮಂಗಳೂರು ವಿವಿಯ ಅಧಿಕೃತ ವೆಬ್‌ಸೈಟ್ www.uucms.karnataka.gov.in ನಲ್ಲಿ ಫಲಿತಾಂಶ ಪ್ರಕಟಿಸಲಾಗಿದೆ' ಕುಲಪತಿ ಪ್ರೊ.ಪಿ.ಎಲ್.ಧರ್ಮ ಹೇಳಿದರು.

ಉಳಿದ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಹಾಗೂ ಬಿಎಚ್‌ಎಂ 8ನೇ ಸೆಮಿಸ್ಟರ್, ಬಿಎ (ಎಸ್‌ಎಲ್‌ಪಿ), ಎನ್‌ಇಪಿ ಅಲ್ಲದ ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ತಿಳಿಸಿದ್ದಾರೆ.

# Mangalore University announces UG sixth semester results

The Hindu Bureau
MANGALURU

Mangalore University on Tuesday announced the results of its sixth semester undergraduate examinations, which were conducted in June and July 2025. Students will have to log on to www.uucms.karnataka.gov.in to know the results.

The results of the 15,534 students who appeared for the examinations of 18 programmes (courses) were announced by Vice-Chancellor P.L. Dharma. A release from the university said that the results were announced three days after completing the evaluation of answer scripts on July 19.

The university said that the evaluation of answer scripts of even semester (2, 4, 6) undergraduate examinations, conducted in June-July, began at four centres on July 2. The sixth semester examinations were announced early to enable students to apply for higher studies and jobs.

H. Devendrappa, Registrar (Evaluation) said that computerising tabulation of marks at the evaluation centres helped in announcing the results in a short span of time after completing the evaluation.

The applications for re-evaluation of answer scripts will be invited once the results of second and fourth semester examinations are announced.

# MU announces 6th sem UG results

TIMES NEWS NETWORK

**Mangaluru:** In order to help final-year undergraduate students, Mangalore University evaluated the sixth-semester papers on priority and announced the results on Tuesday. Results for 15,534 final sem students were announced three days after the evaluation, on the official Mangalore University UUCMS website—www.uucms.karnataka.gov.in. MU recently concluded the second, fourth, and sixth-semester exams for all undergraduate programs in June-July 2025. The evaluation began on July 2 and was conducted across four centres. The evaluation for the sixth semester was completed on July 19. Mangalore University VC PL Dharma officially announced the results at the varsity's Syndicate Hall. Present at the event were university registrar K Raju Mogaveera, registrar (evaluation) Devendrappa H, finance officer Y Sangappa, and other officials.

The results for sixth-semester students of BSc, BCom, BSW, BCA, BBA, BSc, BA, BHM, and BVA programmes have been announced. Results for the second and fourth semesters, as well as eighth semester of BHM, BA (SLP), and non-NEP programme repeat students, will be announced shortly, said Devendrappa.

This time, Mangalore University implemented a fully computerised online system for recording marks directly at the evaluation centres, allowing prompt announcement of results. With the full cooperation of coordinators, exam board presidents, evaluators, and non-teaching staff at all exam centres, the evaluation was completed on time, enabling quick release of results. A notification inviting applications for revaluation (after all results are announced) will be issued soon.

# ಶ್ರೀದೇವಿ ಕಲ್ಲಡ್ಕ ಅವರಿಗೆ ಪಿ ಎಚ್.ಡಿ.



**ಉಳ್ಳಾಲ, ಜು. 22:** ಮಂಗಳೂರು ವಿಶ್ವವಿದ್ಯಾನಿಲಯದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಶ್ರೀದೇವಿ ಕಲ್ಕಡ್ಕ ಇವರು ಡಾ। ಧನಂಜಯ ಕುಂಬ್ಳೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸಿದ 'ಶ್ರೀದೇವಿ ಮಹಾತ್ಮೆ: ಯಕ್ಷಗಾನ ಪ್ರಸಂಗ ಮತ್ತು ಪ್ರಯೋಗ' ಎಂಬ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು ಪಿ.ಎಚ್.ಡಿ. ನೀಡಿದೆ. ಇವರು ರಾಘವೇಂದ್ರ ಕೆ.ಕೆ. ಅವರ ಪತ್ನಿ.

# ಮಂಗಳೂರು ವಿ.ವಿ: ವಿವಿಧ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಮಂಗಳೂರು, ಜು. 22: ಮಂಗಳೂರು ವಿವಿ 2025-26ನೇ ಸಾಲಿನ ವಿವಿಧ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ವಿವಿವಿಶ್ವವಿದ್ಯಾನಿಲಯದಆವರಣ ಮತ್ತು ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು, ವಿವಿ ಸಂಯೋಜಿತ ಕಾಲೇಜುಗಳು (ಸರಕಾರಿ ಕೋಟಾದ ಸೀಟುಗಳು) ಮತ್ತು ಸರಕಾರಿ ಕಾಲೇಜುಗಳಲ್ಲಿ ನಡೆಸಲಾಗುವ ಸ್ನಾತಕೋತ್ತರ/ ಬಿ.ಪಿ.ಎಡ್, ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಆಸಕ್ತರು ಅರ್ಜಿ ಸಲ್ಲಿಸಬಹುದುಎಂದು ವಿವಿ ಪ್ರಕಟನೆ ತಿಳಿಸಿದೆ.

23-7-2025
UDAYAVANI - MANIPAL

### ಮಂಗಳೂರು ವಿಶ್ವವಿದ್ಯಾನಿಲಯ

# ಪದವಿ ಫಲಿತಾಂಶ ಪ್ರಕಟ

ಉಳ್ಳಾಲ, ಜು. 22: ಮಂಗಳೂರು ವಿವಿ ವಿವಿಧ ಪದವಿಯ ಆರನೇ ಸೆಮಿಸ್ಟರ್‌ನ 15,534 ವಿದ್ಯಾರ್ಥಿಗಳ ಫಲಿತಾಂಶ ಜು. 22ರಂದು ವಿವಿಯ ವೆಬ್‌ಸೈಟ್ www.uucms.karnataka.gov.in ನಲ್ಲಿ ಪ್ರಕಟಿಸಿದೆ.

ಕುಲಪತಿ ಪ್ರೊ| ಪಿ.ಎಲ್. ಧರ್ಮ ಸಿಂಡಿಕೇಟ್ ಸಭಾಂಗಣದಲ್ಲಿ ಫಲಿತಾಂಶ ಪ್ರಕಟಿಸಿದರು. ಬಿಎಸ್ಸಿ, ಬಿಕಾಂ, ಬಿಎಸ್‌ಡಬ್ಲ್ಯೂ, ಬಿಸಿಎ, ಬಿಬಿಎ, ಬಿಎಸ್ಸಿ (ಎಫ್‌ಎನ್‌ಡಿ) ಬಿಎಸ್ಸಿ (ಎನಿಮೇಶನ್ ಮತ್ತು ವಿಜುವಲ್ ಇಫೆಕ್ಟ್, ಬಿಎಸ್ಸಿ (ಫುಡ್ ಟೆಕ್ನಾಲಜಿ), ಬಿಎಸ್ಸಿ ( ಹೋಮ್ ಸೈಯನ್ಸ್), ಬಿ.ಎ. (ಎಚ್ ಆರ್‌ಡಿ) ಬಿಎಸ್ಸಿ (ಫ್ಯಾಶನ್ ಡಿಸೈನ್), ಬಿಎಸ್ಸಿ (ಐಡಿಡಿ), ಬಿಎಚ್‌ಎಂ, ಬಿವಿಎ ಫಲಿತಾಂಶ ಪ್ರಕಟವಾಗಿದೆ. ಎಲ್ಲ ಪದವಿಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳ ಹಾಗೂ ಬಿಎಚ್ ಎಂ 8ನೇ ಸೆಮಿಸ್ಟರ್, ಬಿಎ (ಎಸ್ ಎಲ್‌ಪಿ) ಹಾಗೂ ಎಇಪಿ ಅಲ್ಲದ ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶ ಶೀಘ್ರ ಪ್ರಕಟವಾಗಲಿದೆ ಎಂದು ಪರೀಕ್ಷಾಂಗ ಕುಲಸಚಿವ ಪ್ರೊ| ದೇವೇಂದ್ರಪ್ಪ ಎಚ್. ತಿಳಿಸಿದ್ದಾರೆ.

ವಿವಿಯು ಈ ಬಾರಿ ಮೌಲ್ಯಮಾಪನ ಕೇಂದ್ರದಲ್ಲಿಯೇ ಅಂಕತಖ್ತೀಕರಣ ದಾಖಲಿಸುವ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕಗಣಕೀಕರಿಸಲಾಯಿತು. ಜತೆಗೆ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಸಂಯೋಜಕರು, ಪರೀಕ್ಷಾ ಮಂಡಳಿ ಅಧ್ಯಕ್ಷರು, ಮೌಲ್ಯಮಾಪಕರು, ಶಿಕ್ಷಕೇತರ ಸಿಬಂದಿ ಸಹಕರಿಸಿದ್ದರಿಂದ ಕಡಿಮೆ ಸಮಯದಲ್ಲಿ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗಿದೆ. ಪರೀಕ್ಷಾ ಫಲಿತಾಂಶಗಳಿಗೆ ಸಂಬಂಧಿಸಿ, ಮರುಮೌಲ್ಯಮಾಪನಕ್ಕೆಅರ್ಜಿ ಆಹ್ವಾನಿಸಲಾಗುವುದುಎಂದು ಪ್ರಕಟನೆಯಲ್ಲಿ ಅವರು ತಿಳಿಸಿದ್ದಾರೆ.

# ಮಂಗಳೂರು ವಿವಿ: ವಿವಿಧ ಕೋರ್ಸ್‌ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮಂಗಳೂರು, ಜು.22: ಪ್ರಸಕ್ತ (2025-26) ಶೈಕ್ಷಣಿಕ ವರ್ಷದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಆವರಣ ಕೊಣಾಜೆ ಮಂಗಳಗಂಗೋತ್ರಿ ಮತ್ತು ವಿಶ್ವ ವಿದ್ಯಾನಿಲಯ ಕಾಲೇಜು ಮಂಗಳೂರು/ ಮಂಗಳೂರು ವಿಶ್ವ ವಿದ್ಯಾನಿಲಯದ ಸಂಯೋಜಿತ ಕಾಲೇಜುಗಳು (ಸರಕಾರಿ ಕೋಟಾದ ಸೀಟುಗಳು) ಮತ್ತು ಸರಕಾರಿ ಕಾಲೇಜುಗಳಲ್ಲಿ ನಡೆಸಲಾಗುವ ಸ್ನಾತಕೋತ್ತರ/ ಬಿಪಿಎಡ್/ ಡಿಪ್ಲೊಮಾ/ಸರ್ಟಿಫಿಕೆಟ್ ಕೋರ್ಸ್‌ಗಳ ಪ್ರವೇಶಾತಿಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಮಾಹಿತಿಗೆ ಮಂಗಳೂರು ವಿವಿಯ ವೆಬ್‌ಸೈಟ್ www.mangaloreuniversity.ac.inನಿಂದ ಪಡೆದುಕೊಳ್ಳಬಹುದು ಎಂದು ಕುಲಸಚಿವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಪ್ರದೇಶದ ಮೀನು ಮಾರುಕಟ್ಟೆಗಳಿಗೆ ಲಗ್ಗೆ ಇರಿಸಿವೆ. ತಮಿಳುನಾಡು, ಬರುತ್ತಿದ್ದು ದರವೂ ಏರಿಳಿತವನ್ನು ಕಾಣುತ್ತಿದೆ. ಹೊರ ರಾಜ್ಯಗಳಿಂದ

# ಮಂಗಳೂರು ವಿವಿ 6ನೇ ಸೆಮಿಸ್ಟರ್ ಪದವಿ ಫಲಿತಾಂಶ ಪ್ರಕಟ



ಕೊಣಾಜೆ, ಜು.22: ಮಂಗಳೂರು ವಿಶ್ವವಿದ್ಯಾನಿಲಯವು ನಡೆಸಿದ ಎಲ್ಲಾ ಪದವಿಗಳ ಆರನೇ ಸೆಮಿಸ್ಟರ್‌ನ ಪರೀಕ್ಷೆಗಳ ಫಲಿತಾಂಶ ಪ್ರಕಟಗೊಂಡಿವೆ.

ಈ ಪರೀಕ್ಷೆಗಳ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯವು ಜು.2ರಂದು ಆರಂಭಗೊಂಡಿದ್ದು, ನಾಲ್ಕು ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಯುತ್ತಿದೆ. ಪದವಿಯ ಆರನೇ ಸೆಮಿಸ್ಟರ್‌ನ ಮೌಲ್ಯಮಾಪನ ಕಾರ್ಯವು ಜು.19ರಂದು ಪೂರ್ಣಗೊಂಡಿದ್ದು, ವಿದ್ಯಾರ್ಥಿಗಳಿಗೆ ಮುಂದಿನ ಉನ್ನತ ವ್ಯಾಸಂಗಕ್ಕಾಗಿ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಮೌಲ್ಯಮಾಪನ ನಡೆದ ಮೂರೇ ದಿನಗಳಲ್ಲಿ 15,534 ವಿದ್ಯಾರ್ಥಿಗಳ ಫಲಿತಾಂಶವನ್ನು ಜು.22ರಂದು ಮಂಗಳೂರು ವಿವಿಯು UUCMS (ಯುಯುಸಿಎಂಎಸ್) ನ ಅಧಿಕೃತ ವೆಬ್‌ಸೈಟ್ www.uucms.karnataka.gov.in ನಲ್ಲಿ ಪ್ರಕಟಿಸಿದೆ.

ಮಂಗಳೂರು ವಿವಿ ಕುಲಪತಿ ಪ್ರೊ.ಪಿ.ಎಲ್.ಧರ್ಮ ಮಂಗಳೂರು ವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಫಲಿತಾಂಶದ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದರು.

ಈ ಸಂದರ್ಭ ಮಂಗಳೂರು ವಿವಿ ಕುಲಸಚಿವ ಕೆ.ರಾಜು ಮೊಗವೀರ, ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಎಚ್., ಹಣಕಾಸು ಅಧಿಕಾರಿ ಪ್ರೊ.ವೈ.ಸಂಗಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮೌಲ್ಯಮಾಪನ ಪೂರ್ಣಗೊಳಿಸಿದ ಬಿಎಸ್ಸಿ, ಬಿಕಾಂ, ಬಿಎಸ್‌ಡಬ್ಲ್ಯು, ಬಿಸಿಎ, ಬಿಬಿಎ, ಬಿಎಸ್ಸಿ (ಎಫ್‌ಎನ್‌ಡಿ) ಬಿಎಸ್ಸಿ (ಎನ್ನಿಮೇಶನ್ ಮತ್ತು ವಿಶ್ಯುವಲ್ ಇಫೆಕ್ಟ್), ಬಿಎಸ್ಸಿ (ಫುಡ್ ಟೆಕ್ನಾಲಜಿ), ಬಿಎಸ್ಸಿ (ಹೋಮ್ ಸೈಯನ್ಸ್), ಬಿಎ (ಎಚ್‌ಆರ್‌ಡಿ) ಬಿಎಸ್ಸಿ (ಫ್ಯಾಶನ್ ಡಿಸೈನ್), ಬಿಎಸ್ಸಿ (ಐಡಿಡಿ), ಬಿಎಚ್‌ಎಂ, ಬಿವಿಎ ಕೋರ್ಸ್‌ಗಳ 6ನೆ ಸೆಮಿಸ್ಟರ್‌ನ ಫಲಿತಾಂಶವನ್ನು ಪ್ರಕಟಿಸಲಾಗಿದ್ದು ಉಳಿದಂತೆ ಎಲ್ಲಾ ಪದವಿಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳ ಹಾಗೂ ಬಿಎಚ್‌ಎಂ 8ನೇ ಸೆಮಿಸ್ಟರ್, ಬಿಎ (ಎಸ್‌ಎಲ್‌ಪಿ) ಹಾಗೂ ಎನ್‌ಇಪಿ ಅಲ್ಲದ (non NEP) ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಎಚ್. ತಿಳಿಸಿದ್ದಾರೆ.

ಮಂಗಳೂರು ವಿವಿಯು ಈ ಬಾರಿ ಮೌಲ್ಯಮಾಪನ ಕೇಂದ್ರದಲ್ಲಿಯೇ ಅಂಕ ದಾಖಲಿಸುವ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಸಂಪೂರ್ಣವಾಗಿ ಗಣಕೀಕರಣಗೊಳಿಸಿದ್ದರಿಂದ ಮೌಲ್ಯಮಾಪನ ನಡೆಯುತ್ತಿರುವಾಗಲೇ ಫಲಿತಾಂಶವನ್ನು ಪ್ರಕಟಿಸಲು ಸಾಧ್ಯವಾಗಿದೆ. ಇದಕ್ಕೆ ಪೂರಕವಾಗಿ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಂಯೋಜಕರು ಪರೀಕ್ಷಾ ಮಂಡಳಿ ಅಧ್ಯಕ್ಷರು, ಮೌಲ್ಯಮಾಪಕರು, ಶಿಕ್ಷಕೇತರ ಸಿಬ್ಬಂದಿಗಳ ಪೂರ್ಣಪ್ರಮಾಣದ ಸಹಕಾರದಿಂದ ನಿಗದಿತ ಸಮಯದಲ್ಲಿ ಮೌಲ್ಯಮಾಪನವನ್ನು ಪೂರ್ಣಗೊಳಿಸಿ ಅತ್ಯಂತ ಕಡಿಮೆ ಸಮಯದಲ್ಲಿ ಫಲಿತಾಂಶವನ್ನು ಪ್ರಕಟಿಸಿದೆ.

ಪರೀಕ್ಷಾ ಫಲಿತಾಂಶಗಳಿಗೆ ಸಂಬಂಧಿಸಿ, ಮರುಮೌಲ್ಯಮಾಪನಕ್ಕೆ (ಉಳಿದ ಎಲ್ಲಾ ಫಲಿತಾಂಶ ಪ್ರಕಟವಾದ ಬಳಿಕ) ಅರ್ಜಿ ಆಹ್ವಾನಿಸಿ ಸದ್ಯದಲ್ಲಿಯೇ ವಿಶ್ವವಿದ್ಯಾಲಯದಿಂದ ಪ್ರಕಟನೆ ಹೊರಡಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಚಿಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕ ಪಾವತಿಸಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪರೀಕ್ಷಾಂಗ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed, Published and Owned by Abdussalam Puthige on behalf of The Community Media Trust, Mangaluru. Printed at Samvahana Campaigns Private Limited, 271-A, Industrial Area, Baikampady, Mang
Kannada 575011. Editor: Abdussalam Puthige, Tel: 0824-2434767, Email: news@varthabharati.in

# ಮಂಗಳೂರು ವಿವಿ 6ನೇ ಸೆಮಿಸ್ಟರ್ ಪದವಿ ಫಲಿತಾಂಶ ಪ್ರಕಟ



**ವಿಕ ಸುದ್ದಿಲೋಕ** ಮಂಗಳಗಂಗೋತ್ರಿ

ಮಂಗಳೂರು ವಿಶ್ವವಿದ್ಯಾಲಯದ ಎಲ್ಲ ಪದವಿ ಕಾರ್ಯಕ್ರಮಗಳ ಎರಡನೇ, ನಾಲ್ಕನೇ ಮತ್ತು ಆರನೇ ಸೆಮಿಸ್ಟರ್‌ನ ಪರೀಕ್ಷೆಗಳು ಇತ್ತೀಚೆಗೆ ಮುಗಿದಿದ್ದು, ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕಾಗಿ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಮೌಲ್ಯಮಾಪನ ನಡೆದ ಮೂರೇ ದಿನಗಳಲ್ಲಿ 15,534 ವಿದ್ಯಾರ್ಥಿಗಳ ಫಲಿತಾಂಶವನ್ನು ಮಂಗಳವಾರ ಪ್ರಕಟಿಸಲಾಗಿದೆ.

ಮಂಗಳೂರು ವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ವಿವಿಯ ಅಧಿಕೃತ ವೆಬ್ ಸೈಟ್‌ನಲ್ಲಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅವರು ಫಲಿತಾಂಶದ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಿದರು.

ಈ ಪರೀಕ್ಷೆಗಳ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯ ಜು.2ರಂದು ಆರಂಭಗೊಂಡು 4 ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಯುತ್ತಿದೆ. ಪದವಿಯ ಆರನೇ ಸೆಮಿಸ್ಟರ್‌ನ ಮೌಲ್ಯಮಾಪನ ಕಾರ್ಯ ಜು.19ರಂದು ಪೂರ್ಣಗೊಂಡಿದೆ.

ಮಂಗಳೂರು ವಿವಿ ಕುಲಸಚಿವ ಕೆ. ರಾಜು ಮೊಗವೀರ, ಪರೀಕ್ಷಾಂಗ ಕುಲಸಚಿವ ಪ್ರೊ. ದೇವೇಂದ್ರಪ್ಪ ಎಚ್., ಹಣಕಾಸು ಅಧಿಕಾರಿ ಪ್ರೊ.ವೈ.ಸಂಗಪ್ಪ, ಅಧಿಕಾರಿಗಳು ಉಪಸ್ಥಿತರಿದ್ದರು.

ಮೌಲ್ಯಮಾಪನ ಪೂರ್ಣಗೊಳಿಸಿದ ಬಿಎಸ್ಸಿ, ಬಿಕಾಂ, ಬಿಎಸ್‌ಡಬ್ಲ್ಯು, ಬಿಸಿಎ, ಬಿಬಿಎ, ಬಿಎಸ್ಸಿ(ಎಫ್‌ಎನ್‌ಡಿ), ಬಿಎಸ್ಸಿ(ಎನಿಮೇಶನ್ ಮತ್ತು ವಿಷುವಲ್ ಎಫೆಕ್ಟ್, ಬಿಎಸ್ಸಿ(ಫುಡ್ ಟೆಕ್ನಾಲಜಿ), ಬಿಎಸ್ಸಿ(ಹೋಂ ಸೈನ್ಸ್), ಬಿಎ(ಎಚ್‌ಆರ್‌ಡಿ), ಬಿಎಸ್ಸಿ(ಫ್ಯಾಷನ್ ಡಿಸೈನ್), ಬಿಎಸ್ಸಿ(ಐಡಿಡಿ), ಬಿಎಚ್‌ಎಂ, ಬಿವಿಎ ಕಾರ್ಯಕ್ರಮಗಳ 6ನೇ ಸೆಮಿಸ್ಟರ್‌ನ ಫಲಿತಾಂಶ ಪ್ರಕಟಿಸಲಾಗಿದೆ. ಉಳಿದಂತೆ ಎಲ್ಲ ಪದವಿಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್‌ಗಳ ಹಾಗೂ ಬಿಎಚ್‌ಎಂ 8ನೇ ಸೆಮಿಸ್ಟರ್, ಬಿಎ(ಎಸ್‌ಎಲ್‌ಪಿ), ಎನ್‌ಇಪಿ ಅಲ್ಲದ ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶವನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಎಚ್. ತಿಳಿಸಿದ್ದಾರೆ.

ಪರೀಕ್ಷಾ ಫಲಿತಾಂಶಗಳಿಗೆ ಸಂಬಂಧಿಸಿ, ಮರುಮೌಲ್ಯಮಾಪನಕ್ಕೆ (ಉಳಿದ ಎಲ್ಲ ಫಲಿತಾಂಶ ಪ್ರಕಟವಾದ ಬಳಿಕ) ಅರ್ಜಿ ಆಹ್ವಾನಿಸಿ ಸದ್ಯದಲ್ಲಿಯೇ ವಿಶ್ವವಿದ್ಯಾಲಯದಿಂದ ಪ್ರಕಟಣೆ ಹೊರಡಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕ ಪಾವತಿಸಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪರೀಕ್ಷಾಂಗ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಂಗಳೂರು ವಿವಿ 6ನೇ ಸೆಮಿಸ್ಟರ್ ಫಲಿತಾಂಶ



ಮಂಗಳೂರು ವಿವಿ 6ನೇ ಸೆಮಿಸ್ಟರ್ ಪದವಿ ಫಲಿತಾಂಶವನ್ನು ಪ್ರೊ.ಪಿ.ಎಲ್.ಧರ್ಮ ಪ್ರಕಟಿಸಿದರು. ಕೆ.ರಾಜು ಮೊಗವೀರ, ಪ್ರೊ.ದೇವೇಂದ್ರಪ್ಪ ಎಚ್, ಪ್ರೊ.ವೈ.ಸಂಗಪ್ಪ ಇದ್ದರು.

ಮಂಗಳೂರು: ಮಂಗಳೂರು ವಿಶ್ವವಿದ್ಯಾಲಯದ 6ನೇ ಸೆಮಿಸ್ಟರ್ ಪದವಿ ಫಲಿತಾಂಶವನ್ನು ವಿವಿ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ವಿವಿ ಕುಲಪತಿ ಪ್ರೊ.ಪಿ.ಎಲ್ . ಧರ್ಮ ಅವರು ವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಫಲಿತಾಂಶದ ಪಟ್ಟಿಯನ್ನು ಪ್ರಕಟಿಸಿದರು.

ದ್ವಿತೀಯ, ಚತುರ್ಥ ಮತ್ತು 6ನೇ ಸೆಮಿಸ್ಟರ್ ಪರೀಕ್ಷೆಗಳು ಇತ್ತೀಚೆಗೆ ಮುಗಿದಿದ್ದು, ಈ ಪರೀಕ್ಷೆಗಳ ವಿವಿಧ ವಿಷಯಗಳ ಮೌಲ್ಯಮಾಪನ ಕಾರ್ಯ ಜು.2ರಂದು ಆರಂಭಗೊಂಡು 4 ಮೌಲ್ಯಮಾಪನ ಕೇಂದ್ರಗಳಲ್ಲಿ ನಡೆಯುತ್ತಿದೆ. ಪದವಿಯ ಆರನೇ ಸೆಮಿಸ್ಟರ್‌ನ ಮೌಲ್ಯಮಾಪನ ಕಾರ್ಯ ಜು.19ರಂದು ಪೂರ್ಣಗೊಂಡಿದ್ದು ವಿದ್ಯಾರ್ಥಿಗಳಿಗೆ ಮುಂದಿನ ಉನ್ನತ ವ್ಯಾಸಂಗಕ್ಕಾಗಿ ಹಾಗೂ ಉದ್ಯೋಗದ ಹಿತದೃಷ್ಟಿಯಿಂದ ಮೌಲ್ಯಮಾಪನ ನಡೆದ ಮೂರೇ ದಿನಗಳಲ್ಲಿ 15,534 ವಿದ್ಯಾರ್ಥಿಗಳ ಫಲಿತಾಂಶವನ್ನು ಪ್ರಕಟಿಸಿದೆ.

ಮಂಗಳೂರು ವಿವಿ ಕುಲಸಚಿವ ಕೆ.ರಾಜು ಮೊಗವೀರ, ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಎಚ್, ಹಣಕಾಸು ಅಧಿಕಾರಿ ಪ್ರೊ.ವೈ.ಸಂಗಪ್ಪ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಮೌಲ್ಯಮಾಪನ ಪೂರ್ಣಗೊಳಿಸಿದ ಬಿಎಸ್ಸಿ, ಬಿಕಾಂ, ಬಿಎಸ್‌ಡಬ್ಲ್ಯು, ಬಿಸಿಎ, ಬಿಬಿಎ, ಬಿಎಸ್ಸಿ(ಎಫ್‌ಎನ್‌ಡಿ), ಬಿಎಸ್ಸಿ(ಅನಿಮೇಷನ್ ಮತ್ತು ವಿಶ್ಯುವಲ್ ಎಫೆಕ್ಟ್, ಬಿಎಸ್ಸಿ(ಫುಡ್ ಟೆಕ್ನಾಲಜಿ), ಬಿಎಸ್ಸಿ(ಹೋಂ ಸೈನ್ಸ್), ಬಿಎ(ಎಚ್‌ಆರ್‌ಡಿ), ಬಿಎಸ್ಸಿ(ಫ್ಯಾಶನ್ ಡಿಸೈನ್), ಬಿಎಸ್ಸಿ(ಐಡಿಡಿ), ಬಿಎಚ್ ಎಂ, ಬಿವಿಎ ಕಾರ್ಯಕ್ರಮಗಳ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲಾಗಿದ್ದು, ಉಳಿದಂತೆ ಎಲ್ಲ ಪದವಿಗಳ ದ್ವಿತೀಯ ಮತ್ತು ಚತುರ್ಥ ಸೆಮಿಸ್ಟರ್ ಹಾಗೂ ಬಿಎಚ್‌ಎಂ 8ನೇ ಸೆಮಿಸ್ಟರ್, ಬಿಎ(ಎಸ್‌ಎಲ್‌ಪಿ) ಹಾಗೂ ಎನ್‌ಇಪಿ ಅಲ್ಲದ ಕಾರ್ಯಕ್ರಮಗಳ ಪುನರಾವರ್ತಿತ ವಿದ್ಯಾರ್ಥಿಗಳ ಫಲಿತಾಂಶವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವ ಪ್ರೊ.ದೇವೇಂದ್ರಪ್ಪ ಎಚ್. ತಿಳಿಸಿದ್ದಾರೆ.

ಪರೀಕ್ಷಾ ಫಲಿತಾಂಶಗಳಿಗೆ ಸಂಬಂಧಿಸಿ, ಮರುಮೌಲ್ಯಮಾಪನಕ್ಕೆ (ಉಳಿದ ಎಲ್ಲ ಫಲಿತಾಂಶ ಪ್ರಕಟವಾದ ಬಳಿಕ) ಅರ್ಜಿ ಆಹ್ವಾನಿಸಿ ಸದ್ಯದಲ್ಲಿಯೇ ವಿಶ್ವವಿದ್ಯಾಲಯದಿಂದ ಪ್ರಕಟಣೆ ಹೊರಡಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿ ಶುಲ್ಕ ಪಾವತಿಸಿ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಪರೀಕ್ಷಾಂಗ ಕುಲಸಚಿವರು ತಿಳಿಸಿದ್ದಾರೆ.